**ಚಾಸಾ-2 ಪ್ರಾಸಾ-2**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 27456/2017**

| | |
|---|---|
| **ಸಾಕ್ಷಿದಾರರ ಹೆಸರು** | ಕವಿತಾ. |
| ಗಂಡನ **ಹೆಸರು** | ರಾಮಚಂದ್ರ. |
| **ವಯಸ್ಸು** | 40 ವರ್ಷ |
| **ಉದ್ಯೋಗ** | ತರಕಾರಿ ವ್ಯಾಪಾರ. |
| **ವಾಸ** | ಬನಶಂಕರಿ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 03.10.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನನಗೆ ಒಂದನೇ ಆರೋಪಿ ಗೊತ್ತು. ಎರಡನೇ ಆರೋಪಿಯು ಗೊತ್ತಿಲ್ಲ. ಒಂದನೇ ಅರೋಪಿಯು ನನಗೆ ಎರಡನೇ ಆರೋಪಿಯು ಬ್ಯಾಂಕ್ ಮ್ಯಾನೇಜರ್ ಎಂದು ತಿಳಿಸಿದರು. ಮೂರನೇ ಆರೋಪಿಯು ಒಂದನೇ ಆರೋಪಿ ಕಡೆಯಿಂದ ಗೊತ್ತಿರುತ್ತಾರೆ. ಚಾಸಾ-1 , ಚಾಸಾ-3 ಗೊತ್ತು. ಚಾಸಾ-4 ನನ್ನ ತಾಯಿ. ಚಾಸಾ-5 ನನಗೆ ಗೊತ್ತು. ನಾನು 2016 ರಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದೆ, ನನ್ನ ಗಂಡ ತರಕಾರಿ ವ್ಯಾಪಾರ ಮಾಡುತ್ತಿದ್ದರು. ಒಂದನೇ ಆರೋಪಿಯು ನಮಗೆ ತರಕಾರಿ ಇಡಲು ಕೋಲ್ಡ್ ಸ್ಟೋರೇಜ್ ಗೆ ತಾನು ಸಾಲವನ್ನು ಬ್ಯಾಂಕ್ ಮೂಲ ಕ ಕೊಡಿಸುತ್ತೇನೆ ಎಂದು ಹೇಳಿದ್ದರು. ನನಗೆ ರೂ.25ಲಕ್ಷ, ನನ್ನ ತಾಯಿಗೆ ರೂ.25ಲಕ್ಷ ಮತ್ತು ಚಾಸಾ-3 ರವರಿಗೆ ರೂ.10ಲಕ್ಷ ಲೋನ್ ಕೊಡಿಸುತ್ತೇನೆ ಎಂದು ಹೇಳಿದ್ದರು. ಸದರಿ ಸಾಲವನ್ನು ಆವಂತಿ ಫೈನಾನ್ಸ್ ಮೂಲಕ ಕೊಡಿಸುವುದಾಗಿ ಹೇಳಿದ್ದರು. ಒಂದನೇ ಆರೋಪಿಯು ಎರಡನೇ ಆರೋಪಿಯ ಖಾತೆಗೆ ನಮ್ಮಿಂದ ಹಣವನ್ನು ಹಾಕಿಸಿಕೊಳ್ಳುತ್ತಿದ್ದರು. ಮೂರನೇ ಆರೋಪಿಯು ನನಗೆ ಗೊತ್ತಿಲ್ಲ. ಆದರೆ ಒಂದನೇ ಆರೋಪಿಯು ಆತನ ಹೆಸರನ್ನು ಹೇಳಿರುತ್ತಾರೆ. ನಾನು ಒಂದನೇ ಆರೋಪಿಗೆ ಒಟ್ಟು ರೂ.2,90,000/- ಹಣವನ್ನು ಕೊಟ್ಟಿರುತ್ತೇನೆ. ಅದರಲ್ಲಿ ರೂ.2,40,000/- ನಗದು ಹಣ ಮತ್ತು ರೂ.50,000/- ಕಾರ್ಪೊರೇಷನ್ ಬ್ಯಾಂಕ್ ನ ಚೆಕ್ಕನ್ನು ನೀಡಿರುತ್ತೇನೆ. ನನ್ನ ತಾಯಿ

**ಚಾಸಾ-2 ಪ್ರಾಸಾ-2**

ರೂ.2,46,000/- ನಗದು ಹಣವನ್ನು ಒಂದನೇ ಆರೋಪಿಗೆ ನೀಡಿರುತ್ತಾರೆ. ಈ ಹಣವನ್ನು ನಾವು ಆರೋಪಿತರಿಗೆ ಸಬ್ಸಿಡಿ ಹಣ ಬ್ಯಾಂಕ್ ಮೂಲಕ ಬರುತ್ತದೆ ಎಂದು ನೀಡಿರುತ್ತೇವೆ. ಆದರೆ ಆರೋಪಿತರು ಯಾವುದೇ ಬ್ಯಾಂಕ್ ಲೋನ್ ಆಗಲೀ ಅಥವಾ ಸಬ್ಸಿಡಿ ಹಣವನ್ನಾಗಲೀ ಕೊಡಿಸಲಿಲ್ಲ. ಒಂದನೇ ಆರೋಪಿಯು ಒಂದು ಅಂಗಡಿಯನ್ನು ತೆರದಿದ್ದರು. ನಾವು ಅಲ್ಲಿಗೆ ಹೋಗಿ ಹಣವನ್ನು ಕೇಳಿದಾಗ ಒಂದನೇ ಆರೋಪಿಯು ನಮಗೆ ಹಣವನ್ನು ನೀಡಲಿಲ್ಲ. ಆ ನಂತರ ಎರಡನೇ ಆರೋಪಿಯು ಒಂದನೇ ಆರೋಪಿಯ ಗಂಡ ಎಂದು ಗೊತ್ತಾಯಿತು. ಇದರಿಂದ ನಮಗೆ ಆರೋಪಿತರ ಕಡೆಯಿಂದ ಮೋಸ ಆಗಿರುತ್ತದೆ. ಅದೇ ರೀತಿ ಚಾಸಾ-1 ರವರಿಗೆ ಸಹ ಮೋಸ ಆಗಿರುತ್ತದೆ. ಈ ಸಂಬಂಧ ಚಾಸಾ-1 ರವರು ಆರೋಪಿತರ ವಿರುದ್ದ ದೂರನ್ನು ನೀಡಿರುತ್ತಾರೆ. ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಈ ವಿಚಾರವಾಗಿ ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲು : ಶ್ರೀ. ಆರೋಪಿತರ ಪರ ವಕೀಲರು ಗೈರು ಹಾಜರಿದ್ದು ಆರೋಪಿತರನ್ನು ಪಾಟೀಸವಾಲು ಮಾಡಲು ಕೇಳಿದಾಗ ನಮ್ಮ ವಕೀಲರು ಮಾಡುತ್ತಾರೆ ಎಂದು ಹೇಳಿರುತ್ತಾರೆ. ಆದರೆ ಸಮಂಜಸ ಕಾರಣಗಳು ಇರದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**